ಓ ಎಸ್ ನಂ. 101/2019
ಡಿ ಡಬ್ಲ್ಯು 1
ದಿನಾಂಕ 21-07-2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ ವಾದಿ ಪರಃ ಶ್ರೀ ಎಂ ಓ ಜೆ ವಕೀಲರಿಂದಃ</u>

ದಾವಾ ಆಸ್ತಿಗಳು ಬೀರೂರು ಕಾವಲ್ ಗ್ರಾಮಕ್ಕೆ ಸೇದವು ಎಂದರೆ ಸರಿ. ಸದರಿ ಸ್ವತ್ತುಗಳ ಪೈಕಿ ದಾವಾ ಐಟಂ ನಂ.1 ರ ಸರ್ವೆ ನಂ.176 ರ ಆಸ್ತಿಯನ್ನು ವಾದಿ ಖರೀದಿಸಿರುತ್ತಾರೆ ಎಂದರೆ ಸರಿ. ವಾದಿ ಸದರಿ ಸರ್ವೆ ನಂಬರಿನಲ್ಲಿ 4 ಎಕರೆ ಜಮೀನನ್ನು ಖರೀದಿ ಮಾಡಿರುತ್ತಾರೆ ಎಂದರೆ ಸರಿ. ಸದರಿ 4 ಎಕರೆ ಜಮೀನಿನಲ್ಲಿ ನನಗೆ ಯಾವುದೇ ರೀತಿಯ ಹಕ್ಕು ಇಲ್ಲ ಎಂದರೆ ಸರಿ. ಸದರಿ ಸ್ವತ್ತನ್ನು ವಾದಿ ಸರಸ್ವತ್ತಮ್ಮನ ಮಕ್ಕಳಾದ ಹಿರಿಯಣ್ಣಯ್ಯ, ದಿನೇಶ್, ಶ್ರೀರಾಮ ಮತ್ತು ಶ್ರೀಕಾಂತರವರಿಂದ ದಿನಾಂಕ 30/06/2014 ರಂದು ಖರೀದಿಸಿರುತ್ತಾರೆ ಎಂದರೆ ಸರಿ.

2. ನನಗೆ ಸೇರಿದ ಸ್ವತ್ತಿನ ಸರ್ವೆ ನಂ.175 ಆಗಿರುತ್ತದೆ. ಸದರಿ ಸ್ವತ್ತು ನನಗೆ ಹೇಗೆ ಬಂತು ಎಂದರೆ ಸಾಕ್ಷಿ ಲಕ್ಕಮ್ಮರವರಿಂದ ನನ್ನ ಹೆಂಡತಿಯಾದ ಶಾರದಮ್ಮರವರ ಹೆಸರಿಗೆ ಖರೀದಿಸಿರುತ್ತೇನೆ ಎಂದು ನುಡಿಯುತ್ತಾರೆ. ಸದರಿ ಲಕ್ಕಮ್ಮರವರು ನಾರಾಯಣ ಶೆಟ್ರುರವರಿಂದ ಆ ಸ್ವತ್ತನ್ನು ಕ್ರಯಕ್ಕೆ ಪಡೆದಿದ್ದರು. ಲಕ್ಕಮ್ಮ ಎಷ್ಟು ವಿಸ್ತೀರ್ಣದ ಆಸ್ತಿಯನ್ನು ಖರೀದಿಸಿದ್ದರು ಎಂದರೆ ಸಾಕ್ಷಿ 3 ಎಕರೆ ಎಂದು

ನುಡಿಯುತ್ತಾರೆ. 1986 ರಲ್ಲಿ ಲಕ್ಕಮ್ಮರವರು ನನ್ನ ಹೆಂಡತಿ ಶಾರದಮ್ಮರವರಿಗೆ 3 ಎಕರೆ ಸ್ವತ್ತಿಗೆ ಕ್ರಯಪತ್ರ ಮಾಡಿಕೊಟ್ಟಿರುತ್ತಾರೆ. ಸದರಿ ಕ್ರಯಪತ್ರವನ್ನು ನಾನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ಲಕ್ಕಮ್ಮರವರು ಶಾರದಮ್ಮರವರ ಹೆಸರಿಗೆ ಕ್ರಯಪತ್ರ ಮಾಡುವ ಕಾಲಕ್ಕೆ ಆಸ್ತಿ ಲಕ್ಕಮ್ಮರವರ ಹೆಸರಿಗೆ ಇದ್ದ ಬಗ್ಗ ದಾಖಲಾತಿಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಲಕ್ಕಮ್ಮರವರಿಗೆ ಆಸ್ತಿಯನ್ನು ಮಾರಾಟ ಮಾಡಿದ ಮೈಲಾರ ಶೆಟ್ಟರವರಿಗೆ ಆ ಸ್ವತ್ತು ಹೇಗೆ ಬಂತು ಎಂದರೆ ಸಾಕ್ಷಿ ಆ ಸಮಯದಲ್ಲಿ ಸ್ವತಂತ್ರ ಹೋರಾಟದಲ್ಲಿ ಜೈಲಿಗೆ ಹೋಗಿ ಬಂದವರಿಗೆ ಸರ್ಕಾರ ಜಮೀನನ್ನು ಮಾರಾಟ ಮಾಡಿದ್ದು ಅದರಂತೆ ಮೈಲಾರ ಶೆಟ್ಟರವರ ಆ ಸ್ವತ್ತನ್ನು ಪಡೆದುಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಮೇಲ್ಕಂಡಂತೆ ಮೈಲಾರಿ ಶೆಟ್ಟರವರ ಆ ಸ್ವತ್ತನ್ನು ಖರೀದಿಸಿದ ಬಗ್ಗ ದಾಖಲೆ ಹಾಜರುಪಡಿಸಿರುತ್ತೇನಾ ಎಂದರೆ ಸಾಕ್ಷಿ ಇಲ್ಲವೆಂದು ನುಡಿಯುತ್ತಾರೆ.

3. ವಾದಿ ಮತ್ತು ನನ್ನ ಜಮೀನು ಅಕ್ಕಪಕ್ಕದಲ್ಲಿವೆ ಎಂದರೆ ಸರಿ. ವಾದಿಗೆ ಸರ್ವೆ ನಂ.176 ರ ಆಸ್ತಿಯನ್ನು ನಾನೇ ಕೊಡಿಸಿರುತ್ತೇನೆ ಎಂದರೆ ಸರಿ. ವಾದಿ ಸದರಿ ಸ್ವತ್ತನ್ನು ಖರೀದಿಸಿದ ನಂತರ ಅದರಲ್ಲಿ ಅಡಿಕೆ, ತೆಂಗು, ಮಾವು, ಸಪೋಟ, ಸಾಗುವಾನಿ, ಎಳ್ಳಿಕಾಯಿ ಮುಂತಾದವುಗಳನ್ನು ಬೆಳೆಸಿ ಅಭಿವೃದ್ದಿ ಪಡಿಸಿರುತ್ತಾರೆ ಎಂದರೆ ಸರಿ.

ಸರ್ವೆ ನಂ.176ರ ವಾದಿಯ ಜಮೀನು ಮತ್ತು ಸರ್ವೆ ನಂ.175ರ ನನ್ನ ಜಮೀನಿನ ನಡುವೆ ಶಿವಮೊಗ್ಗ - ಬೆಂಗಳೂರು ನಾಲ್ಕು ಪಥದ ರಸ್ತೆ ಹಾದುಹೋಗಿರುತ್ತದೆ ಎಂದರೆ ಸರಿ. ನನ್ನ ಹೆಂಡತಿ ಖರೀದಿಸಿರುವ ಸರ್ವೆ ನಂ.175ರ ಜಮೀನಿನ 3 ಎಕರೆ ಆಸ್ತಿಯನ್ನು ಅಳತೆ ಮಾಡಿಸಿರುತ್ತೇನಾ ಎಂದರೆ ಸಾಕ್ಷಿ ತರೀಕೆರೆಯ ಸರ್ವೆಯರ್ ಮುಖಾಂತರ ಅಳತೆ ಮಾಡಿಸಿರುತ್ತೇನೆ ಎಂದು ನುಡಿಯುತ್ತಾರೆ. ಆ ರೀತಿ ಅಜುಬಾಜುದಾರರಾಗಿ ನೋಟೀಸು ನೀಡಿ ಅಳತೆ ಮಾಡಿದ ದಾಖಲೆಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದೇನಾ ಎಂದರೆ ಸಾಕ್ಷಿ ನನ್ನ ವಕೀಲರಿಗೆ ನೀಡಿದ್ದೆ ಎಂದು ನುಡಿಯುತ್ತಾರೆ. ಸದರಿ ದಾಖಲೆಗಳನ್ನು ನನ್ನ ವಕೀಲರು ನ್ಯಾಯಾಲಯಕ್ಕೆ ಹಾಜರುಪಡಿಸಿದ್ದಾರೆಂದು ತಿಳಿದುಕೊಂಡಿರುತ್ತೇನೆ.

4. ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದವರು ಭೂ ಸ್ವಾಧೀನ ಪ್ರಕ್ರಿಯೆಗೆ ಸಂಬಂದಪಟ್ಟಂತೆ ವಾದಿ ಮತ್ತು ನನ್ನ ಜಮೀನಿನ ಜಂಟಿ ಅಳತೆ (ಜೆ ಎಂ ಸಿ) ಮಾಡಿಸಿರುತ್ತಾರೆ ಎಂದರೆ ಸರಿ. ವಾದಿ ಕ್ರಯಪತ್ರದಂತೆ ಖರೀದಿಸಿರುವಂತಹ ಸ್ವತ್ತಿನಲ್ಲಿ ಅವರು ಸ್ವಾಧೀನದಲ್ಲಿದ್ದಾರೆ ಹಾಗೂ ನನ್ನ ಹೆಂಡತಿಯ ಹೆಸರಿನಲ್ಲಿ ಕ್ರಯಕ್ಕೆ ಪಡೆದ ಸ್ವತ್ತಿನಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ. ವಾದಿ ಸರ್ವೆ ನಂ.176ರ 4 ಎಕರೆ ಜಮೀನಿನ ಮೇಲೆ ನನಗೆ ಯಾವುದೇ ಹಕ್ಕು ಅಧಿಕಾರ ಇರುವುದಿಲ್ಲ ಎಂದರೆ ಸರಿ. ವಾದಿಯ ಜಮೀನಿನ ಚಕ್ಕುಬಂದಿಯಲ್ಲಿ ಅವರು ಸ್ವಾಧೀನದಲ್ಲಿದ್ದಾರೆ ನಮ್ಮ ಜಮೀನಿನ

ಚಕ್ಕುಬಂದಿಯಲ್ಲಿ ನಾವು ಸ್ವಾಧೀನದಲ್ಲಿದ್ದೇವೆ ಎಂದರೆ ಸರಿ. ಕಂದಾಯ ಅಧಿಕಾರಿಗಳು ಕಂದಾಯ ದಾಖಲೆಗಳಲ್ಲಿ ಸರ್ವೆ ನಂಬರುಗಳನ್ನು ನಮೂದು ಮಾಡುವ ಸಮಯದಲ್ಲಿ ಸರ್ವೆ ನಂ.175 ರ ಬದಲಾಗಿ 176 ಎಂದು ಹಾಗೂ ಸರ್ವೆ ನಂ.176 ರ ಬದಲಾಗಿ 175 ಎಂದು ನಮೂದು ಮಾಡಿರುತ್ತಾರೆ ಎಂದರೆ ಸರಿ. ಹದ್ದುಬಸ್ತಿ ಪ್ರಾಧಿಕಾರದವರು ಅಳತೆ ಮಾಡಿ ಕೊಟ್ಟಿರುವಂತಹ ಜೆ ಎಂ ಸಿ ನಕ್ಷೆ ಸರಿ ಇರುತ್ತದೆ ಎಂದರೆ ಸಾಕ್ಷಿ ಹೌದು ಎಂದು ನುಡಿಯುತ್ತಾರೆ. ಸದರಿ ನಕ್ಷೆಯಲ್ಲಿ ಯಾರ ಯಾರ ಜಮೀನಿನಲ್ಲಿ ಏನೇನು ಬೆಳೆದಿರುತ್ತಾರೆಂಬುದನ್ನು ಸಹ ನಮೂದು ಮಾಡಿರುತ್ತಾರೆ ಎಂದರೆ ಸರಿ. ಸರ್ವೆ ನಂ.176 ರ 4 ಎಕರೆ ಜಮೀನಿಗೆ ವಾದಿ ಮಾಲೀಕರು ಎಂದರೆ ಸರಿ. ಸದರಿ ಸ್ವತ್ತಿನ ಮೇಲೆ ನನ್ನ ಯಾವುದೇ ತಂಟೆ ತಕರಾರು ಇರುವುದಿಲ್ಲ ಎಂದರೆ ಸರಿ.

ಮುಂದುವರೆದ ಪಾಟೀ ಸವಾಲನ್ನು ಕೋರಿಕೆಯ ಮೇರೆಗೆ ಮುಂದೂಡಲಾಯಿತು.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ ಹೇ ಕೇ ಸ ಇ ಎ ಒ

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು
ಜೆ ಎಂ ಎಫ್ ಸಿ, ಕಡೂರು.